ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 13-10-1992.

# *ನಂಬರ್‌ವನ್ ಆಗಬೇಕೆಂದರೆ ಜ್ಞಾನ-ಯೋಗಗಳನ್ನು ಸ್ವರೂಪದಲ್ಲಿ ತನ್ನಿರಿ*

(नम्बरवन बनना है तो ज्ञान और योग को स्वरूप में लाओ)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸ್ವಯಂ ಪ್ರಕಾಶ ಸ್ವರೂಪವಾಗಿ ಅನೇಕರ ಅಂಧಕಾರವನ್ನು ತೊಲಗಿಸುವ ಚೈತನ್ಯ ದೀಪಗಳೊಂದಿಗೆ ಸತ್ಯ ಶಿಕ್ಷಕನಾದ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಇಂದು ಸತ್ಯಶಿಕ್ಷಕನಾದ ಬಾಪ್‌ದಾದಾ ತನ್ನ ಶ್ರೇಷ್ಠ ಶಿಕ್ಷಣವನ್ನು ಧಾರಣೆ ಮಾಡಿ ಕೊಳ್ಳುವಂತಹ ಈಶ್ವರೀಯ ವಿದ್ಯಾರ್ಥಿಗಳನ್ನು ನೋಡುತ್ತಿದ್ದಾರೆ- ಪ್ರತಿಯೊಬ್ಬ ಈಶ್ವರೀಯ ವಿದ್ಯಾರ್ಥಿಯು ಈ ಈಶ್ವರೀಯ ಶಿಕ್ಷಣವನ್ನು ಎಲ್ಲಿಯವರೆಗೆ ಧಾರಣೆ ಮಾಡಿಕೊಂಡಿದ್ದಾರೆ? ಓದಿಸುವವರು ಒಬ್ಬರೇ ಆಗಿದ್ದಾರೆ. ವಿದ್ಯೆಯೂ ಒಂದೇ ಆಗಿದೆ ಆದರೆ ಓದುವವರು ವಿದ್ಯೆಯಲ್ಲಿ ನಂಬರ್‌ವಾರ್ ಆಗಿದ್ದಾರೆ. ಪ್ರತಿನಿತ್ಯದ ಮುರಳಿಯ ಮೂಲಕ ಪ್ರತೀ ಸ್ಥಾನದಲ್ಲಿ ಒಂದೇ ಮುರಳಿಯನ್ನು ಕೇಳುತ್ತಾರೆ ಅರ್ಥಾತ್ ಒಂದೇ ಪಾಠವನ್ನು ಓದುತ್ತಾರೆ. ಮುರಳಿ ಅರ್ಥಾತ್ ಪಾಠವು ಪ್ರತೀ ಸ್ಥಾನದಲ್ಲಿ ಒಂದೇ ಆಗಿರುತ್ತದೆ. ಭಲೆ ದಿನಾಂಕದ ವ್ಯತ್ಯಾಸವಾಗಬಹುದು ಆದರೆ ಮುರಳಿಯು ಅದೇ ಆಗಿರುತ್ತದೆ ಆದರೂ ನಂಬರ್‌ವಾರ್ ಏಕೆ? ಏತಕ್ಕಾಗಿ ನಂಬರ್ ಆಗುತ್ತದೆ? ಏಕೆಂದರೆ ಈ ಈಶ್ವರೀಯ ವಿದ್ಯೆಯನ್ನು ಓದುವ ವಿಧಿಯು ಕೇವಲ ಕೇಳುವುದಷ್ಟೇ ಅಲ್ಲ, ಪ್ರತಿಯೊಂದು ಮಹಾವಾಕ್ಯವನ್ನು ಸ್ವರೂಪದಲ್ಲಿ ತರಬೇಕಾಗಿದೆ. ಅಂದಮೇಲೆ ಎಲ್ಲರೂ ಕೇಳುವುದು ಒಂದೇರೀತಿ ಇದೆ ಆದರೆ

ಸ್ವರೂಪರಾಗುವುದರಲ್ಲಿ ನಂಬರ್‌ವಾರ್ ಆಗಿಬಿಡುತ್ತಾರೆ. ನಾನು ನಂಬರ್‌ವನ್ ಆಗಬೇಕೆಂಬ ಲಕ್ಷ್ಯವು ಎಲ್ಲರಿಗೂ ಇರುತ್ತದೆ. ಇದೇ ಲಕ್ಷ್ಯವಿದೆಯಲ್ಲವೆ! ಲಕ್ಷ್ಯವು ನಂಬರ್‌ವನ್ ಆಗುವುದಾಗಿದೆ ಆದರೆ ಫಲಿತಾಂಶದಲ್ಲಿ ನಂಬರ್‌ವಾರ್ ಆಗಿಬಿಡುತ್ತೀರಿ ಏಕೆಂದರೆ ಲಕ್ಷ್ಯವನ್ನು ಲಕ್ಷಣದಲ್ಲಿ ತರುವುದರಲ್ಲಿ ಅಂತರವಾಗಿಬಿಡುತ್ತದೆ.

ಈ ವಿದ್ಯೆಯಲ್ಲಿ ಹೆಚ್ಚಿನ ಸಬ್ಜೆಕ್ಟ್‌ಗಳೂ ಇಲ್ಲ. ಕೇವಲ ನಾಲ್ಕು ಸಬ್ಜೆಕ್ಟ್‌ಗಳನ್ನು ಧಾರಣೆ ಮಾಡಿಕೊಳ್ಳುವುದರಲ್ಲಿ ಕಷ್ಟವೇನಿದೆ! ನಾಲ್ಕು ಸಬ್ಜೆಕ್ಟ್‌ಗಳಿಗೂ ಒಂದರ ಜೊತೆ ಇನ್ನೊಂದರ ಸಂಬಂಧವಿದೆ. ಒಂದುವೇಳೆ ಒಂದು (ಜ್ಞಾನ) ಸಬ್ಜೆಕ್ಟನ್ನು ಸಂಪೂರ್ಣ ವಿಧಿಪೂರ್ವಕವಾಗಿ ಧಾರಣೆ ಮಾಡಿಕೊಳ್ಳಿ ಅರ್ಥಾತ್ ಜ್ಞಾನದ ಒಂದೊಂದು ಶಬ್ದವನ್ನು ಸ್ವರೂಪದಲ್ಲಿ ತನ್ನಿರಿ. ಮುಖ್ಯವಾಗಿ ಜ್ಞಾನವು ಎರಡೇ ಶಬ್ದಗಳದಾಗಿದೆ ಇದನ್ನೇ ರಚಯಿತ ಮತ್ತು ರಚನೆಯ ಜ್ಞಾನ ಅಥವಾ ತಂದೆ ಮತ್ತು ವಾರಸತ್ವ(ಆಸ್ತಿ)ವೆಂದು ಹೇಳುತ್ತೀರಿ. ರಚಯಿತ ತಂದೆಯ ಅರಿವಾಯಿತು ಎಂದರೆ ಪರಮಾತ್ಮನ ಪರಿಚಯ, ಸಂಬಂಧ ಸ್ಪಷ್ಟವಾಯಿತು ಮತ್ತು ರಚನೆ ಅರ್ಥಾತ್ ಮೊದಲ ರಚನೆ "ನಾನು ಶ್ರೇಷ್ಠ ಆತ್ಮನಾಗಿದ್ದೇನೆ" ಮತ್ತು ಎರಡನೆಯದಾಗಿ "ನಾನಾತ್ಮ ಈ ಬೇಹದ್ದಿನ ರಚನೆ ಅರ್ಥಾತ್ ನಾನಾತ್ಮನದು ಈ ಬೇಹದ್ದಿನ ರಚನೆ ಅರ್ಥಾತ್ ಬೇಹದ್ದಿನ ನಾಟಕದಲ್ಲಿ ಇಡೀ ಕಲ್ಪದಲ್ಲಿ ಯಾವ-ಯಾವ ಪಾತ್ರವಿದೆ" - ಎಂಬ ಈ ಸಂಪೂರ್ಣ ಜ್ಞಾನವಂತು ಎಲ್ಲರಿಗೂ ಇದೆಯಲ್ಲವೆ! ಆದರೆ ಶ್ರೇಷ್ಠಾತ್ಮ ಸ್ವರೂಪನಾಗಿ ಪ್ರತೀಸಮಯ ಶ್ರೇಷ್ಠ ಪಾತ್ರವನ್ನಭಿನಯಿಸುವುದರಲ್ಲಿ ಕೆಲವೊಮ್ಮೆ ನೆನಪಿರುತ್ತದೆ, ಕೆಲವೊಮ್ಮೆ ಮರೆತುಹೋಗುತ್ತೀರಿ. ಒಂದುವೇಳೆ ಇವೆರಡು ಶಬ್ದಗಳ ಜ್ಞಾನವು ಇದ್ದಿದ್ದೇ ಆದರೆ ಯೋಗವೂ ಸಹ ಇವೆರಡು ಶಬ್ದಗಳ ಆಧಾರದ ಮೇಲಿದೆಯಲ್ಲವೆ. ಜ್ಞಾನದೊಂದಿಗೆ ಯೋಗದ ಸ್ವತಹ ಸಂಬಂಧವಿದೆ. ಯಾರು 'ಜ್ಞಾನಿ ಆತ್ಮ'ನಾಗಿದ್ದಾರೆಯೋ ಅವರು ಅವಶ್ಯವಾಗಿ ಯೋಗಿ ಅತ್ಮನಾಗಿರುತ್ತಾರೆ ಅಂದಮೇಲೆ ಜ್ಞಾನ ಹಾಗೂ ಯೋಗದ ಸಂಬಂಧವಾಯಿತಲ್ಲವೆ. ಯಾರು ಜ್ಞಾನಿ ಮತ್ತು ಯೋಗಿಯಾಗಿರುವರೋ ಅವರ ಧಾರಣೆಯು ಶ್ರೇಷ್ಠವಾಗಿರುವುದೋ ಅಥವಾ ಬಲಹೀನವಾಗಿರುವುದೋ? ಸ್ವತಹ ಶ್ರೇಷ್ಠವಾಗಿರುತ್ತದೆಯಲ್ಲವೆ, ಸಹಜವಾಗಿರುತ್ತದೆಯಲ್ಲವೆ ಅಥವಾ ಧಾರಣೆಯಲ್ಲಿ ಕಷ್ಟವಾಗುವುದೇ? ಯಾರು 'ಜ್ಞಾನಿ ಆತ್ಮ, ಯೋಗಿ ಆತ್ಮನಾಗಿರುವರೋ ಅವರು ಧಾರಣೆಯಲ್ಲಿ ನಿರ್ಬಲರಾಗಲು ಸಾಧ್ಯವೇ? ಇಲ್ಲ. ಒಂದುವೇಳೆ ಧಾರಣೆಯಲ್ಲಿ ನಿರ್ಬಲರಾಗಿದ್ದಾರೆಂದರೆ ಇದರ ಅರ್ಥವು ಕೇವಲ ಜ್ಞಾನಿಯಾಗಿದ್ದಾರೆ ಆದರೆ ಜ್ಞಾನಿ ಆತ್ಮನ ಸ್ಥಿತಿಯಲ್ಲ. ಕೇವಲ ಯೋಗ ಜೋಡಿಸುವವರಾಗಿದ್ದಾರೆ ಆದರೆ ಯೋಗಿ ಜೀವನದವರಲ್ಲ, ಜೀವನವು ಸದಾ ಇರುತ್ತದೆ ಮತ್ತು ಜೀವನವು ಸ್ವಾಭಾವಿಕವಾಗಿರುತ್ತದೆ. ಯೋಗಿಜೀವನ ಎಂದರೆ ನಿಜ ಸಂಸ್ಕಾರವು ಯೋಗಿಯದಾಗಿರುತ್ತದೆ.

63 ಜನ್ಮಗಳ ವಿಸ್ಮೃತಿಯ ಸಂಸ್ಕಾರ ಅಥವಾ ಬಲಹೀನತೆಯ ಸಂಸ್ಕಾರವು ಬ್ರಾಹ್ಮಣ ಜೀವನದಲ್ಲಿ ಕೆಲಕೆಲವೊಂದೆಡೆ ಮೂಲ ಸಂಸ್ಕಾರವಾಗಿ ಪುರುಷಾರ್ಥದಲ್ಲಿ ವಿಘ್ನ ಹಾಕುತ್ತದೆ. ಭಲೆ ಎಷ್ಟಾದರೂ ಸ್ವಯಂ ಅಥವಾ ಅನ್ಯರು ಇದನ್ನು ಪರಿವರ್ತನೆ ಮಾಡಿಕೊಳ್ಳಿ ಎಂದು ಗಮನ ಸೆಳೆಯಬಹುದು ಅಥವಾ ಇದನ್ನು ಪರಿವರ್ತನೆಯಾಗಬೇಕೆಂದು ಸ್ವಯಂ ತಿಳಿದುಕೊಳ್ಳಲೂಬಹುದು ಆದರೆ ತಿಳಿದಿದ್ದರೂ ಸಹ ಏನು ಹೇಳುತ್ತೀರಿ? ಇಷ್ಟವಂತೂ ಇಲ್ಲ ಆದರೆ ನನ್ನ ಸ್ವಭಾವವೇ

ಇದಾಗಿದೆ ಎಂದು ಹೇಳುತ್ತೀರಿ ಅಂದಮೇಲೆ ಸ್ವಭಾವವು ಸ್ವಾಭಾವಿಕವಾಯಿತಲ್ಲವೆ. ಯಾರ ಮಾತಿನಲ್ಲಿ ಹಾಗೂ ವ್ಯವಹಾರದಲ್ಲಿ ಜ್ಞಾನಸಂಪನ್ನ ವ್ಯವಹಾರ ಹಾಗೂ ಯೋಗಿಜೀವನ ಪ್ರಮಾಣ ವ್ಯವಹಾರ ಹಾಗೂ ಮಾತು ಇರುವುದಿಲ್ಲವೋ ಅವರು ಏನು ಹೇಳುವರು? ನನ್ನ ಸ್ವಾಭಾವಿಕ ಮಾತೇ ಹೀಗಿದೆ. ನಾನು ಮಾತನಾಡುವ ಶೈಲಿಯೇ ಹೀಗಿದೆ ಎಂದು ಹೇಳುತ್ತಾರೆ ಅಥವಾ ನನ್ನ ಚಲನೆಯೇ ಅಫಿಷಿಯಲ್ ಅಥವಾ ಗಂಭೀರವಾಗಿದೆ ಎಂದು ಹೇಳುತ್ತಾರೆ. ಹೆಸರನ್ನು ಬಹಳ ಚೆನ್ನಾಗಿ ಹೇಳುತ್ತಾರೆ- ಆವೇಶವೇನೂ ಇಲ್ಲ ಆದರೆ ನನ್ನ ಮಾತೇ ಅಫಿಷಿಯಲ್' ಆಗಿದೆ ಎನ್ನುತ್ತಾರೆ ಅಂದಾಗ ತಿಳಿದುಕೊಂಡಿದ್ದರೂ ಸಹ ಸ್ವಭಾವವು ಸ್ವಾಭಾವಿಕವಾಗಿ ಕಾರ್ಯ ಮಾಡುತ್ತಿರುತ್ತದೆ ಅದರಲ್ಲಿ ಪರಿಶ್ರಮಪಡಬೇಕಾಗುವುದಿಲ್ಲ. ಹೀಗೆ ಯಾರು ಜ್ಞಾನಿಜೀವನ ಹಾಗೂ ಯೋಗಿಜೀವನದಲ್ಲಿರುವರೋ ಅವರಿಗೆ ಜ್ಞಾನ ಮತ್ತು ಯೋಗಸಂಪನ್ನ ಪ್ರತೀ ಕರ್ಮವು ಸ್ವಾಭಾವಿಕವಾಗುತ್ತದೆ ಅರ್ಥಾತ್ ಜ್ಞಾನ ಮತ್ತು ಯೋಗವೇ ಅವರ ಸಂಸ್ಕಾರವಾಗಿಬಿಡುತ್ತದೆ ಮತ್ತು ಸಂಸ್ಕಾರವಾಗಿರುವ ಕಾರಣ ಶ್ರೇಷ್ಠಕರ್ಮ ಯುಕ್ತಿಯುಕ್ತ ಕರ್ಮವು ಸ್ವಾಭಾವಿಕವಾಗಿ ಆಗುತ್ತಿರುತ್ತದೆ ಅಂದಮೇಲೆ ತಿಳಿಯಿತೆ. ಸ್ವಭಾವವು ಸ್ವಾಭಾವಿಕವನ್ನಾಗಿ ಮಾಡಿಬಿಡುತ್ತದೆ ಅಂದಾಗ ಜ್ಞಾನ ಮತ್ತು ಯೋಗವು ಮೂಲ ಸಂಸ್ಕಾರವಾಗಿಬಿಡಲಿ. ಅವರಿಗೇ ಜ್ಞಾನಿಜೀವನ, ಯೋಗಿಜೀವನದವರೆಂದು ಹೇಳಲಾಗುತ್ತದೆ.

**ಎಲ್ಲರೂ ಜ್ಞಾನಿಗಳಾಗಿದ್ದೀರಿ. ಎಲ್ಲರೂ ಯೋಗಿಗಳಾಗಿದ್ದೀರಿ ಆದರೆ ಅಂತರವೇನು? ಒಂದು ಪ್ರಕಾರದವರು- ಜ್ಞಾನವನ್ನು ಕೇಳುವವರು & ಹೇಳುವವರು ಯಥಾಶಕ್ತಿ ಜೀವನದಲ್ಲಿ ತರುವವರಾಗಿದ್ದಾರೆ. ಎರಡನೆಯವರು ಜ್ಞಾನ ಮತ್ತು ಯೋಗವನ್ನು ಪ್ರತೀಸಮಯ ತಮ್ಮ ಜೀವನದ ಸಂಸ್ಕಾರವನ್ನಾಗಿ ಮಾಡಿಕೊಳ್ಳುವವರು. ಎಲ್ಲರೂ ವಿದ್ಯಾರ್ಥಿಗಳಾಗಿದ್ದೀರಿ ಆದರೆ ಈ ಅಂತರವಾಗಿರುವ ಕಾರಣ ನಂಬರ್ ವಾರ್ ಆಗಿಬಿಡುತ್ತೀರಿ.** ಯಾರ ಸಂಸ್ಕಾರವೇ ಜ್ಞಾನ ಮತ್ತು ಯೋಗದ್ದಾಗಿರುವುದೋ ಅವರ ಧಾರಣೆಯೂ ಸಹ ಸ್ವಾಭಾವಿಕವಾಗುವುದು. ಸ್ವಾಭಾವಿಕ ಸ್ವಭಾವ-ಸಂಸ್ಕಾರವೇ ಧಾರಣಾ ಸ್ವರೂಪದ್ದಾಗಿರುತ್ತದೆ. ಪದೇ- ಪದೇ ಈ ಗುಣವನ್ನು ಧಾರಣೆ ಮಾಡಿಕೊಳ್ಳಬೇಕು. ಆ ಗುಣವನ್ನು ಧಾರಣೆ ಮಾಡಿಕೊಳ್ಳಬೇಕೆಂದು ಪುರುಷಾರ್ಥ ಮಾಡಬೇಕಾಗುವುದಿಲ್ಲ. ಆದರೆ ಮೊಟ್ಟಮೊದಲು ತಳಹದಿಯ ಸಮಯದಲ್ಲಿಯೇ ಜ್ಞಾನ, ಯೋಗ ಮತ್ತು ಧಾರಣಾ ಸ್ವರೂಪವನ್ನಾಗಿ ತನ್ನ ಜೀವನವನ್ನು ಮಾಡಿಕೊಂಡರು ಆದ್ದರಿಂದ ಈ ಮೂರು ಸಬ್ಜೆಕ್ಟ್‌ಗಳು ಇಂತಹ ಆತ್ಮನ ಸ್ವತಹ ಮತ್ತು ಸ್ವಾಭಾವಿಕ ಅನುಭೂತಿಗಳಾಗಿಬಿಡುತ್ತವೆ ಆದ್ದರಿಂದ ಇಂತಹ ಆತ್ಮರಿಗೆ ಸಹಜ ಯೋಗಿ, ಸಹಜ ಜ್ಞಾನಿ, ಸಹಜ ಧಾರಣಾ ಮೂರ್ತಿಗಳೆಂದು ಹೇಳಲಾಗುತ್ತದೆ. ಮೂರೂ ಸಭೆಕ್ಟ್ ಗಳಿಗೆ ಸಂಬಂಧವಿದೆ. ಯಾರ ಬಳಿ ಎಷ್ಟು ಅನುಭೂತಿಗಳ ಖಜಾನೆಯು ಸಂಪನ್ನವಾಗಿರುವುದೋ ಅಂತಹ ಸಂಪನ್ನ ಮೂರ್ತಿಗಳು ಸ್ವತಹ ಮಾಸ್ಟರ್ ದಾತನಾಗಿಬಿಡುತ್ತಾರೆ. ದಾತಾ ಅರ್ಥಾತ್ ಸೇವಾಧಾರಿ. ದಾತನು, ಕೊಡದೇ ಇರಲು ಸಾಧ್ಯವಿಲ್ಲ. ದಾತಾತನದ ಸಂಸ್ಕಾರದಿಂದ ಸ್ವತಹವಾಗಿಯೇ ಸೇವೆಯ ಸಭೆಕ್ಟ್ ಪ್ರಾಕ್ಟಿಕಲ್‌ನಲ್ಲಿ ಸಹಜವಾಗಿಬಿಡುತ್ತದೆ. ಅಂದಮೇಲೆ ನಾಲ್ಕು ಸಜ್ಜೆಕ್ಟ್‌ಗಳಿಗೆ ಸಂಬಂಧವಿದೆ ಎಂದಾಯಿತಲ್ಲವೆ. ನನ್ನಲ್ಲಿ ಜ್ಞಾನವಂತೂ ಚೆನ್ನಾಗಿದೆ ಆದರೆ ಧಾರಣೆಯಲ್ಲಿ ಕೊರತೆಯಿದೆ ಎಂದು ಯಾರಾದರೂ ಹೇಳುವುದಾದರೆ ಅವರಿಗೂ ಜ್ಞಾನಿಗಳೆಂದು ಹೇಳಲಾಗುವುದೇ? ಜ್ಞಾನವನ್ನಂತೂ ಅನ್ಯರಿಗೂ ತಿಳಿಸುತ್ತೀರಲ್ಲವೆ. ಇದ್ದ ಕಾರಣವೇ ಕೊಡುತ್ತಿದ್ದೀರಿ.

ಒಂದಾಗಿದೆ ತಿಳಿದುಕೊಳ್ಳುವುದು, ಇನ್ನೊಂದಾಗಿದೆ ಸ್ವರೂಪದಲ್ಲಿ ತರುವುದು. ತಿಳಿದುಕೊಳ್ಳುವುದರಲ್ಲಿ ಎಲ್ಲರೂ ಬುದ್ಧಿವಂತರಾಗಿದ್ದೀರಿ. ತಿಳಿಸುವುದರಲ್ಲಿಯೂ ಎಲ್ಲರೂ ಬುದ್ಧಿವಂತರಾಗಿದ್ದೀರಿ ಆದರೆ ನಂಬರ್‌ವನ್ ಆಗಬೇಕೆಂದರೆ ಜ್ಞಾನ-ಯೋಗವನ್ನು ಸ್ವರೂಪದಲ್ಲಿ ತನ್ನಿರಿ ಆಗ ನಂಬರ್‌ವಾರ್ ಆಗುವುದಿಲ್ಲ. ನಂಬರ್‌ವನ್ ಆಗುವಿರಿ.* ಹೇಳಿದ್ದೆನಲ್ಲ- ಇಂದು ಸತ್ಶಿಕ್ಷಕ ತನ್ನ ನಾಲ್ಕಾರು ಕಡೆಯ ಈಶ್ವರೀಯ ವಿದ್ಯಾರ್ಥಿಗಳನ್ನು ನೋಡುತ್ತಿದ್ದಾರೆ, ಏನು ನೋಡಿರಬಹುದು? ಎಲ್ಲರೂ ನಂಬರ್‌ವನ್ ಆಗಿ ಕಾಣಿಸಿದರೋ ಅಥವಾ ನಂಬರ್‌ವಾರ್ ಆಗಿ ಕಾಣಿಸಿದರೋ? ಫಲಿತಾಂಶವೇನಿರಬಹುದು? ಅಥವಾ ಒಬ್ಬರೇ ನಂಬರ್‌ವನ್ ಆಗುವರು, ನಾವಂತೂ ನಂಬರ್‌ವಾರ್ ನಲ್ಲಿಯೇ ಬರುತ್ತೇವೆಂದು ತಿಳಿಯುತ್ತೀರಾ? ಫಸ್ಟ್ ಡಿವಿಶನಲ್ಲಂತೂ ಬರಬಹುದಲ್ಲವೆ. ಅದರಲ್ಲಿ ಒಬ್ಬರೇ ಇರುವುದಿಲ್ಲ ಪರಿಶೀಲನೆ ಮಾಡಿಕೊಳ್ಳಿರಿ- ಒಂದುವೇಳೆ ಪದೇ-ಪದೇ ಯಾವುದೇ ವಿಷಯದಲ್ಲಿ ಸ್ಥಿತಿಯು ಏರಿಳಿತವಾಗುತ್ತಿದ್ದರೆ ಪದೇ-ಪದೇ ಪುರುಷಾರ್ಥದಲ್ಲಿಯೂ ಪರಿಶ್ರಮಪಡಬೇಕಾಗುತ್ತದೆ. ಇದರಿಂದಲೇ ಜ್ಞಾನದ ಮೂಲ ಸಬ್ಜೆಕ್ಟ್ ನ ಎರಡು ಶಬ್ದಗಳು- ರಚಯಿತ ಮತ್ತು ರಚನೆಯ ವಿದ್ಯೆಯನ್ನು ಸ್ವರೂಪದಲ್ಲಿ ತಂದಿಲ್ಲ, ಜೀವನದಲ್ಲಿ ಮೂಲಸಂಸ್ಕಾರದ ರೂಪದಲ್ಲಿ ಅಥವಾ ಮೂಲಸ್ವಭಾವದ ರೂಪದಲ್ಲಿ ತಂದಿಲ್ಲ ಎಂದು ಸಿದ್ಧವಾಗುತ್ತದೆ. ಬ್ರಾಹ್ಮಣ ಜೀವನದ ಸ್ವಾಭಾವಿಕ ಸ್ವಭಾವ-ಸಂಸ್ಕಾರವೇ ಯೋಗಿಜೀವನ, ಜ್ಞಾನಿಜೀವನವಾಗಿದೆ. ಜೀವನ ಅರ್ಥಾತ್ ನಿರಂತರ ಸದಾ ಇರುತ್ತದೆ. 8 ಗಂಟೆಗಳ ಜೀವನ, 4 ಗಂಟೆಗಳ ಜೀವನ, ಈ ರೀತಿಯಿರುವುದಿಲ್ಲ. ಇಂದು 10 ಗಂಟೆಗಳ ಯೋಗಿಗಳಾದೆವು. ಇಂದು 12 ಗಂಟೆಗಳು ಯೋಗಿಗಳಾದೆವು, 2 ಗಂಟೆಯ ಯೋಗಿಯಾದೆವು. ಈ ರೀತಿಯಲ್ಲ. ಅಂತಹವರು ಯೋಗವನ್ನು ಜೋಡಿಸುವ ಯೋಗಿಗಳೇ ಹೊರತು ಯೋಗಿಜೀವನದ ಯೋಗಿಗಳಲ್ಲ. ವಿಶೇಷವಾಗಿ ಸಂಘಟಿತ ರೂಪದಲ್ಲಿ ಏತಕ್ಕಾಗಿ ಕುಳಿತುಕೊಳ್ಳುತ್ತೀರೆಂದರೆ ಸರ್ವರ ಯೋಗದ ಶಕ್ತಿಯಿಂದ ವಾಯುಮಂಡಲದ ಮೂಲಕ ನಿರ್ಬಲ ವಿದ್ಯಾರ್ಥಿಗಳನ್ನು ಅಥವಾ ವಿಶ್ವದ ಸರ್ವಆತ್ಮರನ್ನು ಯೋಗಶಕ್ತಿಯ ಮೂಲಕ ಪರಿವರ್ತನೆ ಮಾಡೋಣವೆಂದು. ಆದ್ದರಿಂದ ಅದೂ ಸಹ ಅವಶ್ಯಕವಾಗಿದೆ ಆದರೆ ಕೇವಲ ತನ್ನದೇ ಮುರಿದುಹೋಗಿರುವ ಯೋಗವನ್ನು ಜೋಡಿಸುತ್ತಾ ಇರುವುದಕ್ಕಾಗಿ ನೀವು ಯೋಗದಲ್ಲಿ ಕುಳಿತುಕೊಳ್ಳುವುದಿಲ್ಲ. ಸಂಘಟಿತ ಶಕ್ತಿಯೂ ಸಹ ಸೇವೆಗೆ ನಿಮಿತ್ತವಾಗಿದೆ ಆದರೆ ಕೇವಲ ನನ್ನ ಸಂಬಂಧವು ಪುನಃ ತಂದೆಯೊಂದಿಗೆ ಜೋಡಣೆಯಾಗಲಿ ಎಂದು ಯೋಗಭಟ್ಟಿ ಮಾಡುವುದಿಲ್ಲ. ಒಂದುವೇಳೆ ನೀವು ನಿರ್ಬಲ ಆತ್ಮನಾಗಿದ್ದರೆ ಮಾತ್ರ ಇದಕ್ಕಾಗಿಯೇ ಕುಳಿತುಕೊಳ್ಳುತ್ತೀರಿ ಆದರೆ ಒಂದುವೇಳೆ "ಯೋಗಿ ಆತ್ಮ" ನಾಗಿದ್ದೀರೆಂದರೆ ಮಾಸ್ಟರ್ ಸರ್ವಶಕ್ತಿವಂತರಾಗಿ ಮಾಸ್ಟರ್ ವಿಶ್ವಕಲ್ಯಾಣಕಾರಿಗಳಾಗಿ ಸರ್ವರಿಗೂ ಸಹಯೋಗ ನೀಡುವ ಸೇವೆ ಮಾಡುತ್ತೀರಿ ಅಂದಮೇಲೆ ವಿದ್ಯೆ ಅರ್ಥಾತ್ ಸ್ವರೂಪರಾಗುವುದು, ಒಳ್ಳೆಯದು-

ಇಂದು ದೀಪಾವಳಿಯನ್ನು ಆಚರಿಸಲು ಬಂದಿದ್ದೀರಿ. ಆಚರಿಸುವ ಅರ್ಥವೇನಾಗಿದೆ? ದೀಪಾವಳಿಯಲ್ಲಿ ಏನು ಮಾಡುತ್ತೀರಿ? ದೀಪವನ್ನು ಬೆಳಗಿಸುತ್ತೀರಿ. ಇತ್ತೀಚೆಗಂತೂ ಲೈಟ್‌ಗಳನ್ನು ಉರಿಸುತ್ತಾರೆ ಅಂದಾಗ ಲೈಟ್‌ನ ಬಳಿ ಏನು ಬರುತ್ತವೆ? ಪತಂಗಗಳು(ದೀಪದಹುಳು). ಪತಂಗಗಳ ವಿಶೇಷತೆಯೇನು? ಬಲಿಹಾರಿಯಾಗುವುದು. ಅಂದಾಗ ದೀಪಾವಳಿಯನ್ನು ಆಚರಿಸುವ ಅರ್ಥವೇನಾಯಿತು? ಬಲಿಹಾರಿಯಾಗಿಬಿಟ್ಟಿದ್ದೀರಿ. ಬಲಹಾರಿಯಾಗಿಬಿಟ್ಟಿದ್ದೀರೋ? ಅಥವಾ ಇಂದು ಆಗಬೇಕಾಗಿದೆಯೋ? (ಆಗಿಬಿಟ್ಟಿದ್ದೇವೆ) ಆಗಿಬಿಟ್ಟಿದ್ದೀರೆಂದರೆ ದೀಪಾವಳಿಯನ್ನು ಆಚರಿಸಿಬಿಟ್ಟಿದ್ದೀರಿ ಎಂದಾಯಿತು.

ಮತ್ತೇಕೆ ಆಚರಿಸುತ್ತೀರಿ? ಯಾವಾಗ ಬಲಿಹಾರಿಯಾಗಿಬಿಟ್ಟಿದ್ದೀರೋ ಆಗ ದೀಪಾವಳಿಯನ್ನು ಆಚರಿಸಿಬಿಟ್ಟರಿ ಎಂದಾಯಿತು ಅಥವಾ ಮಧ್ಯ-ಮಧ್ಯದಲ್ಲಿ ಇನ್ನೂ ಸುತ್ತಾಡಲು ಹೋಗುತ್ತೀರಾ? ಬಲಿಹಾರಿಯಾಗಿಬಿಟ್ಟಿದ್ದೀರಿ ಆದರೆ ಇನ್ನೂ ಸ್ವಲ್ಪ ರೆಕ್ಕೆಗಳಿದೆ ಆದ್ದರಿಂದ ಸ್ವಲ್ಪ ಸುತ್ತಾಡಲು ಹೋಗುತ್ತೀರಿ. ಹೀಗೆ ಸುತ್ತಾಡುವವರಂತೂ ಅಲ್ಲ ತಾನೆ! ಸುತ್ತಾಡುವುದು ಎಂದರೆ ಯಾವುದಾದರೊಂದು ಮಾಯೆಯ ರೂಪದಿಂದ ಮೋಸಹೋಗುವುದು. ಮಾಯೆಗೆ ಮೋಸಹೋಗುತ್ತೀರಾ ಅಥವಾ ಮಾಯೆಗೆ ಸೋಲುಂಟು ಮಾಡಿಸುತ್ತೀರಾ? ಅಥವಾ ಕೆಲವೊಮ್ಮೆ ವಿಜಯಿಗಳು, ಕೆಲವೊಮ್ಮೆ ಮೋಸಹೋಗುತ್ತೀರಾ?

ದೀಪಾವಳಿಯೆಂದರೆ ಇದು ತಮ್ಮದೇ ನೆನಪಾರ್ಥವನ್ನು ಆಚರಿಸುತ್ತೀರಿ. ತಮ್ಮದೇ ಸ್ಮೃತಿಚಿಹ್ನೆಯಾಗಿದೆಯಲ್ಲವೆ ಅಥವಾ ಇದು ಮುಖ್ಯ ಆತ್ಮರ ಸ್ಮೃತಿಚಿಹ್ನೆಯಾಗಿದೆ. ತಾವು ಕೇವಲ ನೋಡುವವರಾಗಿದ್ದೀರಾ? ತಮ್ಮೆಲ್ಲರ ಸ್ಮೃತಿಚಿಹ್ನೆಯಾಗಿದೆ ಆದ್ದರಿಂದ ಇತ್ತೀಚೆಗೆ ಬಹಳ ಅಂದಾಜಿನಲ್ಲಿ ದೀಪಗಳ ಬದಲು ಚಿಕ್ಕ-ಚಿಕ್ಕ ಬಲ್ಬುಗಳನ್ನು ಉರಿಸುತ್ತೀರಿ, ದೀಪಗಳ ಸಂಖ್ಯೆ ಕಡಿಮೆಯಾಗಲೂಬಹುದು ಆದರೆ ತಮ್ಮ ಸಂಖ್ಯೆಯು ಬಹಳಷ್ಟಿದೆಯಲ್ಲವೆ ಆದ್ದರಿಂದ ಎಲ್ಲರ ನೆನಪಿನಲ್ಲಿ ಅನೇಕ ಚಿಕ್ಕ-ಚಿಕ್ಕ ಬಲ್ಬುಗಳನ್ನು ಉರಿಸುತ್ತೀರಿ. ತಮ್ಮದೇ ಸ್ಮೃತಿಚಿಹ್ನೆಯನ್ನು ಆಚರಿಸುತ್ತಿದ್ದಾರೆ. ದೀಪಗಳನ್ನು ನೋಡಿದಾಗ ಇದು ನಮ್ಮದೇ ನೆನಪಾರ್ಥವೆಂದು ತಿಳಿಯುತ್ತೀರಾ? ಸ್ಮೃತಿ ಬರುತ್ತದೆಯೇ? ಸಂಗಮಯುಗದ ವಿಶೇಷತೆಯೇನೆಂದರೆ ಚೈತನ್ಯ ದೀಪಗಳು ತಮ್ಮ ಜಡ ನೆನಪಾರ್ಥ ದೀಪಗಳನ್ನು ನೋಡುತ್ತೀರಿ. ಸ್ವಯಂ ಚೈತನ್ಯದಲ್ಲಿದ್ದೀರಿ ಮತ್ತು ಜಡ ನೆನಪಾರ್ಥವನ್ನು ನೋಡುತ್ತಿದ್ದೀರಿ. ಹಾಗೆ ನೋಡಿದರೆ ಯಾವ ದಿನ ದೀಪಾವಳಿಯನ್ನಾಚರಿಸುತ್ತೀರೋ ಆ ದಿನವೇ ವಾಸ್ತವಿಕ ದಿನಾಂಕವಾಗಿದೆ. ಇದನ್ನಂತೂ ಕೇವಲ ಪ್ರಪಂಚದವರು ದಿನಾಂಕವನ್ನು ನಿಗಧಿಪಡಿಸಿದ್ದಾರೆ ಆದರೆ ತಮ್ಮ ದಿನಾಂಕವೇ ಬೇರೆಯಾಗಿದೆ. ಆದ್ದರಿಂದ ಯಾವ ದಿನದಂದು ತಾವು ಬ್ರಾಹ್ಮಣರು ಆಚರಿಸುವರೋ ಅದೇ ಸತ್ಯವಾದ ದಿನಾಂಕವಾಗಿದೆ ಆದ್ದರಿಂದ ಯಾವುದೇ ತಿಥಿಯನ್ನು ನಿಗಧಿಪಡಿಸುತ್ತಾರೆಂದರೆ ಯಾರೊಂದಿಗೆ ಕೇಳುತ್ತಾರೆ? ಬ್ರಾಹ್ಮಣರಿಂದಲೇ ಕೇಳುತ್ತಾರಲ್ಲವೆ, ಇಂದು ಬಾಪ್‌ದಾದಾ ಎಲ್ಲಾ ದೇಶ-ವಿದೇಶದ ಸದಾ ಬೆಳಗಿರುವ ದೀಪಗಳಿಗೆ ದೀಪಾವಳಿಯ ಶುಭಾಷಯಗಳನ್ನು ನೀಡುತ್ತಿದ್ದಾರೆ. ದೀಪಾವಳಿಯ ಶುಭಾಷಯಗಳು ಅರ್ಥಾತ್ ಸಂಪನ್ನರಾಗುವ ಶುಭಾಷಯಗಳು!

**ಹೀಗೆ ಸದಾ ಜಾಗೃತಜ್ಯೋತಿಗಳು, ಸದಾ ಸ್ವಯಂ ಪ್ರಕಾಶಸ್ವರೂಪರಾಗಿ ಅನೇಕರ ಅಂಧಕಾರವನ್ನು ಕಳೆಯುವಂತಹ ಸತ್ಯದೀಪಗಳು, ಸದಾ ನಾಲ್ಕು ಸಬ್ಜೆಕ್ಟ್‌ಗಳನ್ನು ಜೊತೆಜೊತೆಯಲ್ಲಿ ಜೀವನದಲ್ಲಿ ತರುವವರು. ಎಲ್ಲಾ ಸಬ್ಜೆಕ್ಟ್‌ಗಳಲ್ಲಿ ನಂಬರ್‌ವನ್ ಲಕ್ಷ್ಯವನ್ನು ಲಕ್ಷಣದಲ್ಲಿ ತರುವವರು, ಇಂತಹ ಜ್ಞಾನಿ- ಯೋಗಿ ಆತ್ಮರು, ದಿವ್ಯಗುಣ ಸ್ವರೂಪ ಆತ್ಮರು, ನಿರಂತರ ಸೇವಾಧಾರಿಗಳು, ಶ್ರೇಷ್ಠ ವಿಶ್ವಕಲ್ಯಾಣಕಾರಿ ಅತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**"ಅವ್ಯಕ್ತ ಬಾಪ್ ದಾದಾರವರೊಂದಿಗೆ ಪರ್ಸನಲ್ ಭೇಟಿ"**

ಯಾರ ಚಹರೆ ಹಾಗೂ ಚಲನೆಯಲ್ಲಿ ಸದಾ ಖುಷಿಯ ಹೊಳಪು ಕಾಣಿಸುತ್ತದೆಯೋ ಅವರೇ ಅದೃಷ್ಟವಂತರಾಗಿದ್ದಾರೆ. ಎಲ್ಲರೂ ತಮ್ಮನ್ನು ಅದೃಷ್ಟವಂತ ಆತ್ಮರೆಂದು ತಿಳಿದುಕೊಳ್ಳುತ್ತೀರಾ? ಅವರ ಚಹರೆ ಮತ್ತು ಚಲನೆಯಿಂದ ಖುಷಿಯ ಹೊಳಪು ಕಾಣಿಸುತ್ತದೆ. ಸ್ಥೂಲ ಕಾರ್ಯವನ್ನೇ ಮಾಡಲಿ, ಸಾಧಾರಣ ಕೆಲಸವನ್ನೇ ಮಾಡುತ್ತಿರಲಿ. ಆದರೆ ಪ್ರತಿ ಕರ್ಮ ಮಾಡುತ್ತಾ ಖುಷಿಯ ಹೊಳಪು ಕಾಣಿಸುತ್ತದೆ ಇದಕ್ಕೆ ಹೇಳಲಾಗುತ್ತದೆ ಖುಷಿಯಲ್ಲಿ ಮನಸ್ಸು ಕುಣಿಯುತ್ತಿರಲಿ ಎಂದು. ಈ ರೀತಿ ಸದಾ ಇರುತ್ತೀರಾ? ಅಥವಾ ಕೆಲವೊಮ್ಮೆ ಬಹಳ ಖುಷಿ ಇರುತ್ತದೆ ಕೆಲವೊಮ್ಮೆ ಕಡಿಮೆ. ಖುಷಿಯ ಖಜಾನೆ ತಮ್ಮ ಖಜಾನೆ ಆಯಿತು ಎಂದ ಮೇಲೆ ಖುಷಿಯ ಖಜಾನೆ ಸದಾ ಜೊತೆಯಲ್ಲಿರುತ್ತದೆಯಲ್ಲವೇ ಅಥವಾ ಕೆಲವೊಮ್ಮೆ ಮಾತ್ರ ಇರುತ್ತದೆಯೇ? ಬಾಬಾರವರ ಖಜಾನೆಯನ್ನು ತನ್ನ ಖಜಾನೆಯನ್ನಾಗಿ ಮಾಡಿಕೊಂಡಿದ್ದೀರಾ ಅಥವಾ ಮರೆತು ಹೋಗುತ್ತದೆಯೇ? ತಮ್ಮ ಸ್ಥೂಲ ವಸ್ತುಗಳ ನೆನಪಿರುತ್ತದೆಯಲ್ಲವೇ. ಆ ಖಜಾನೆ ಕಣ್ಣಿಗೆ ಕಾಣಿಸುತ್ತದೆ ಆದರೆ ಈ ಖಜಾನೆ ಕಣ್ಣಿಗೆ ಕಾಣಿಸುವುದಿಲ್ಲ. ಹೃದಯದಿಂದ ಅನುಭವ ಮಾಡುತ್ತೀರಿ ಎಂದ ಮೇಲೆ ಅನುಭವ ಮಾಡಿದಂತಹ ಮಾತು ಎಂದಾದರೂ ಮರೆತು ಹೋಗುತ್ತದೆಯೇ ಹಾಗಾದರೆ ಸದಾ ಈ ಸ್ಮೃತಿಯಲ್ಲಿರಿ - ನಾವು ಖುಷಿಯ ಖಜಾನೆಯ ಮಾಲೀಕರಾಗಿದ್ದೇವೆ. ಎಷ್ಟು ಖಜಾನೆ ನೆನಪಿನಲ್ಲಿರುತ್ತದೆ ಅಷ್ಟು ನಶೆಯಿರುತ್ತದೆ ಮತ್ತು ಈ ಆತ್ಮೀಕ ನಶೆಯನ್ನು ಅನ್ಯರಿಗೂ ಅನುಭವ ಮಾಡಿಸಲಾಗುತ್ತದೆ. ಇವರ ಬಳಿ ಏನೋ ಇದೆ ಎಂದು ಮಾತೆಯರಿಗೆ ಪ್ರತೀ ಸಮಯ ಏನು ನೆನಪಿನಲ್ಲಿರುತ್ತದೆ. ಕೇವಲ ತಂದೆ ನೆನಪಿನಲ್ಲಿರುತ್ತಾರೆಯೊ ಅಥವಾ ಬೇರೆ ಏನಾದರೂ ನೆನಪಿರುತ್ತದೆಯೋ? ಆಸ್ತಿಯ ಖುಷಿಯಂತೂ ಕಂಡು ಬರುತ್ತದೆಯಲ್ಲವೇ ಯಾವಾಗ ಬ್ರಾಹ್ಮಣ ಜೀವನದಲ್ಲಿ ತಂದೆಯೇ ಸಂಸಾರವಾಗಿದ್ದಾರೆ, ಎಂದ ಮೇಲೆ ಸಂಸಾರದ ಹೊರತು ಮತ್ತೇನು ನೆನಪು ಬರುತ್ತದೆ. ಸದಾ ಹೃದಯದಲ್ಲಿ ತನ್ನ ಶ್ರೇಷ್ಠ ಭಾಗ್ಯದ ಗೀತೆಯನ್ನು ಹಾಡುತ್ತಿರಿ. ಇಂತಹ ಶ್ರೇಷ್ಠ ಭಾಗ್ಯ ಇಡೀ ಕಲ್ಪದಲ್ಲಿ ಪ್ರಾಪ್ತವಾಗುತ್ತದೆಯೇ? ಯಾರು ಇಡೀ ಕಲ್ಪದಲ್ಲಿ ಈಗ ಪ್ರಾಪ್ತರಾಗಿದ್ದಾರೆ. ಈ ಖುಷಿ, ಈಗಿನ ನಶೆ ಎಲ್ಲದಕ್ಕಿಂತ ಶ್ರೇಷ್ಠಾತಿ ಶ್ರೇಷ್ಠವಾಗಿದೆ ಎಂದ ಮೇಲೆ ಮಾತೆಯರಿಗೆ ಬೇರೆ ಯಾರಾದರೂ ಸಂಬಂಧಿಕರು ನೆನಪು ಬರುತ್ತಾರೆಯೇ? ಯಾವುದೇ ಸಂಬಂಧದಲ್ಲಿ ಹೆಚ್ಚು ಕಡಿಮೆ ಆದರೆ ಮೋಹ ಹೋಗುತ್ತದೆಯೇ? ಎಲ್ಲಾ ಮೋಹ ಸಮಾಪ್ತಿಯಾಗಿದೆಯೇ? ಏನೇ ಆಗಲಿ ನನಗೆ ಮೋಹ ಬರುವುದಿಲ್ಲವೆಂದು ಯಾರು ಹೇಳುತ್ತೀರೋ ಅವರು ಕೈ ಎತ್ತಿ. ಒಳ್ಳೆಯದು, ಮೋಹದ ಪೇಪರ್ ಭಲೆ ಬರಲಿ ಪಾಂಡವರಂತು ನಷ್ಟಮೋಹ ಆಗಿದ್ದೀರಲ್ಲವೇ. ವ್ಯವಹಾರದಲ್ಲೂ ಏನೇ ಮೇಲೆ ಕೆಳಗೆ ಆಗಲಿ, ಆದರೂ ನಷ್ಟಮೋಹ ಆಗಿದ್ದೀರಾ? ಈಗಲೂ ಸಹ ಮಧ್ಯ ಮಧ್ಯದಲ್ಲಿ ಮಾಯೆಯಂತು ಪೇಪರ್ ತೆಗೆದುಕೊಳ್ಳುತ್ತದೆಯಲ್ಲವೇ? ಹಾಗಾದರೆ ಅದರಲ್ಲಿ ಪಾಸ್ ಆಗುತ್ತೀರಾ? ಅಥವಾ ಯಾವಾಗ ಮಾಯೆ ಬರುತ್ತದೆಯೋ ಆಗ ಸ್ವಲ್ಪ ಸಡಿಲವಾಗಿ ಬಿಡುತ್ತೀರಾ? ಹಾಗಾದರೆ ಸದಾ ಖುಷಿಯ ಗೀತೆಯನ್ನು ಹಾಡುತ್ತಿರಿ. ತಿಳಿಯಿತೇ? ಏನೇ ಹೋಗಲಿ ಆದರೆ ಖುಷಿ ಹೋಗದಿರಲಿ, ಯಾವುದೇ ರೂಪದಲ್ಲಿ ಮಾಯೆ ಬರಲಿ ಆದರೆ ಖುಷಿ ಹೋಗದಿರಲಿ. ಈ ರೀತಿ ಖುಷಿಯಾಗಿರುವಂತಹವರೇ ಸದಾ ಅದೃಷ್ಟವಂತರಾಗಿದ್ದಾರೆ. ಒಳ್ಳೆಯದು.

ಈಗ ಆಂಧ್ರ ಹಾಗು ಕರ್ನಾಟಕದವರು ಯಾವ ಕಮಾಲ್(ಅದ್ಭುತ) ಮಾಡಬೇಕು. ಯಾವುದೇ ಆತ್ಮ ವಂಚಿತರಾಗಿ ಉಳಿದು ಬಿಡಬಾರದು. ಪ್ರತಿಯೊಬ್ಬರಿಗೂ ಸಂದೇಶ ಕೊಡಬೇಕು. ಎಲ್ಲಿಯೇ ಇರುತ್ತೀರಿ ಸರ್ವ ಆತ್ಮರಿಗೆ ಸಂದೇಶ ತಲುಪಬೇಕು. ಎಷ್ಟು ಸಂದೇಶ ಕೊಡುತ್ತಿರೋ ಅಷ್ಟು ಖುಷಿ ಹೆಚ್ಚುತ್ತಾ ಹೋಗುತ್ತದೆ. ಒಳ್ಳೆಯದು.

ರಿವೈಸ್ ಕೋರ್ಸ್ 13-10-1992

***ನಂಬರ್ ವನ್ ಆಗಬೇಕೆಂದರೆ ಜ್ಞಾನ, ಯೋಗಗಳನ್ನು ಸ್ವರೂಪದಲ್ಲಿ ತನ್ನಿರಿ***

ಬ್ರಾಹ್ಮಣ ಜೀವನದ ಸ್ವಾಭಾವಿಕ ಸ್ವಭಾವ ಸಂಸ್ಕಾರವೇ ಯೋಗಿ ಜೀವನ ಮತ್ತು ಜ್ಞಾನಿ ಜೀವನವಾಗಿದೆ. ಜೀವನ ಅರ್ಥಾತ್ ನಿರಂತರ ಮತ್ತು ಸದಾ ಇರುತ್ತದೆ ಎಂಟು ಅಥವಾ ನಾಲ್ಕು ಗಂಟೆಗಳು ಇರುವುದಿಲ್ಲ. ಇಂದು 10 ಗಂಟೆಗಳ ಯೋಗಿಗಳಾದೆವು, 12 ಗಂಟೆಗಳ ಯೋಗಿಗಳಾದೆವು, 2 ಗಂಟೆಯ ಯೋಗಿಯಾದೆವು ಈ ರೀತಿಯಲ್ಲ. ಅಂತಹವರು ಯೋಗವನ್ನು ಜೋಡಿಸುವ ಯೋಗಿಗಳೇ ಹೊರತು ಯೋಗೀ ಜೀವನದ ಯೋಗಿಗಳಲ್ಲ. ವಿಶೇಷವಾಗಿ ಸಂಘಟಿತ ರೂಪದಲ್ಲಿ ಸರ್ವರ ಯೋಗದ ಶಕ್ತಿಯಿಂದ, ವಾಯುಮಂಡಲದ ಮೂಲಕ ನಿರ್ಬಲ ವಿದ್ಯಾರ್ಥಿಗಳನ್ನು ಅಥವಾ ವಿಶ್ವದ ಸರ್ವಾತ್ಮರನ್ನು ಯೋಗ ಶಕ್ತಿಯ ಮೂಲಕ ಪರಿವರ್ತನೆ ಮಾಡಲು ಕುಳಿತುಕೊಳ್ಳುತ್ತೀರಿ ಇದು ಕೂಡ ಅವಶ್ಯಕವಾಗಿದೆ ಆದರೆ ಕೇವಲ ನಿಮ್ಮ ಮುರಿದು ಹೋಗಿರುವ ಯೋಗವನ್ನು ಜೋಡಿಸುತ್ತಾ ಇರಲು ಯೋಗದಲ್ಲಿ ಕುಳಿತುಕೊಳ್ಳುವುದಲ್ಲ. ಸಂಘಟಿತ ಶಕ್ತಿಯು ಸಹ ಸೇವೆಗೆ ನಿಮಿತ್ತವಾಗಿದೆ. ಆದರೆ ಕೇವಲ ನನ್ನ ಸಂಬಂಧವು ಪುನಃ ತಂದೆಯೊಂದಿಗೆ ಜೋಡಣೆಯಾಗಲಿ ಎಂದು ಯೋಗ ಭಟ್ಟಿ ಮಾಡುವುದಿಲ್ಲ. ಒಂದು ವೇಳೆ ನೀವು ನಿರ್ಬಲ ಆತ್ಮನಾಗಿದ್ದರೆ ಮಾತ್ರ ಇದಕ್ಕಾಗಿಯೇ ಕುಳಿತುಕೊಳ್ಳುತ್ತೀರಿ ಆದರೆ ಮಾಸ್ಟರ್ ಸರ್ವಶಕ್ತಿವಂತರಾಗಿ, ಮಾಸ್ಟರ್ ವಿಶ್ವಕಲ್ಯಾಣಕಾರಿಗಳಾಗಿ ಸಹಯೋಗ ನೀಡುವ ಸೇವೆಯನ್ನು ಯೋಗಿ ಆತ್ಮರೇ ಮಾಡುತ್ತಾರೆ. ಅಂದಮೇಲೆ ವಿದ್ಯೆ ಅರ್ಥಾತ್ ಸ್ವರೂಪರಾಗುವುದು ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಶಿವಪರಮಾತ್ಮ ತಿಳಿಸಿರುವ ಪ್ರತಿಯೊಂದು ಮಹಾ ವಾಕ್ಯವನ್ನು ಸ್ವರೂಪದಲ್ಲಿ ತಂದು ಲಕ್ಷ್ಯ ಮತ್ತು ಲಕ್ಷಣದ ಸಮಾನತೆಯನ್ನು ಇಟ್ಟುಕೊಂಡು ನಂಬರ್ ವನ್ ಆಗಿದ್ದೇನೆ.

2. ನಾನು ರಚಯಿತ(ಪರಮಾತ್ಮನ ಪರಿಚಯ, ಪರಮಾತ್ಮನೊಂದಿಗೆ ಸಂಬಂಧ) ರಚನೆ (ನಾನು ಶ್ರೇಷ್ಠ ಆತ್ಮ ಮತ್ತು ನನಗೆ ಬೇಹದ್ ನಾಟಕದಲ್ಲಿ ಯಾವ ಯಾವ ಪಾತ್ರಗಳು ಇವೆ) ಎಂಬ ಜ್ಞಾನದ ಸ್ವರೂಪವಾಗಿ ಪ್ರತಿಯೊಂದು ಸಮಯ ಶ್ರೇಷ್ಠ ಪಾತ್ರವನ್ನು ಅಭಿನಯಿಸಿದ್ದೇನೆ.

3. ನಾನು ಜ್ಞಾನಿ, ಯೋಗಿಯಾಗಿ ಇರುತ್ತಾ ನನ್ನ ಧಾರಣೆಯನ್ನು ಸ್ವತಃ ಮತ್ತು ಸಹಜವಾಗಿ ಶ್ರೇಷ್ಠವಾಗಿಸಿಕೊಂಡಿರುವ ಧಾರಣಾ ಸ್ವರೂಪ.

4. ನಾನು ನನ್ನ 63 ಜನ್ಮಗಳ ವಿಸ್ಮೃತಿಯ ಸಂಸ್ಕಾರವನ್ನು, ಬಲಹೀನ ಸಂಸ್ಕಾರವನ್ನು ಪರಿವರ್ತನೆ ಮಾಡಿಕೊಂಡಿದ್ದೇನೆ.

5. ನಾನು ಜ್ಞಾನ ಮತ್ತು ಯೋಗವನ್ನು ಮುಖ್ಯ ಸಂಸ್ಕಾರವನ್ನಾಗಿಸಿಕೊಂಡು ಶ್ರೇಷ್ಠಕರ್ಮವನ್ನು, ಯುಕ್ತಿಯುತ ಕರ್ಮವನ್ನು ಸ್ವಾಭಾವಿಕವಾಗಿ ಮಾಡಿ ಜ್ಞಾನಿ ಯೋಗಿ ಜೀವನದಲ್ಲಿ ಇದ್ದೇನೆ.

6. ನನ್ನ ಸ್ವತಹ ಸ್ವಭಾವ ಸಂಸ್ಕಾರವೇ ಧಾರಣಾ ಸ್ವರೂಪವನ್ನಾಗಿ ಮಾಡಿಕೊಂಡಿರುವ ಯೋಗಿ, ಸಹಜ ಜ್ಞಾನಿ, ಸಹಜ ಧಾರಣಾ ಸ್ವರೂಪ.

7. ನಾನು ಸರ್ವ ಅನುಭೂತಿಗಳ ಖಜಾನೆಯೊಂದಿಗೆ ಸಂಪನ್ನವಾಗಿ ಇರುವ ಮಾಸ್ಟರ್ ದಾತನು.

8. ನಾನು ಜ್ಞಾನ, ಯೋಗಗಳನ್ನು ಸ್ವರೂಪದಲ್ಲಿ ತಂದು ನಂಬರ್ ವನ್ ಆಗಿದ್ದೇನೆ.

9. ನಾನು ನಿರಂತರ ಮತ್ತು ಸದಾ ಯೋಗೀ ಜೀವನವನ್ನು ಕಳೆಯುತ್ತಿದ್ದೇನೆ. (ಗಂಟೆಗಳ ಯೋಗಿ ಜೀವನವಲ್ಲ)

10. ನಾನು ಸಂಪೂರ್ಣ ಬಲಿಹಾರಿಯಾಗಿ ದೀಪಾವಳಿಯನ್ನು ಆಚರಿಸಿಕೊಂಡಿದ್ದೇನೆ. (ಇದೇ ವಾಸ್ತವಿಕ ತಿಥಿ)

11. ನಾನು ಸದಾ ಜಾಗೃತಿ ಜ್ಯೋತಿಯಾಗಿ ಇರುತ್ತಾ ಸ್ವಯಂಪ್ರಕಾಶ ಸ್ವರೂಪವಾಗಿ ಅನೇಕರ ಅಂದಕಾರವನ್ನು ತೊಲಗಿಸಿ ಸತ್ಯವಾದ ದೀಪಾವಳಿಯನ್ನು ಆಚರಿಸಿಕೊಂಡಿದ್ದೇನೆ.